**ಕರ್ನಾಟಕ ರಾಜ್ಯ ಮಹಿಳಾ ಆಯೋಗ**

**ನಂ.107, ಕಾವೇರಿ ಭವನ, ಮೊದಲನೇ ಮಹಡಿ, ಕರ್ನಾಟಕ ಗೃಹ ಮಂಡಳಿ ಕಟ್ಟಡ, ಕೆ.ಜಿ. ರಸ್ತೆ, ಬೆಂಗಳೂರು–09,**

**ದೂರವಾಣಿ ಸಂಖ್ಯೆ:080–22216485/86, ಟೆಲಿಫ್ಯಾಕ್ಸ್: 080–22216485 ಈ–ಮೇಲ್: kscwbang123@gmail.com**

ಸಂ:ಕರಾಮಆ/ದೂ.ಅ./ಬೆಂ–493/2025–26 /165/2 ದಿನಾಂಕ:13.11.2025

ಗೆ,

ಪೊಲೀಸ್ ಆಯುಕ್ತರು,
ಪೊಲೀಸ್ ಆಯುಕ್ತರವರ ಕಛೇರಿ,
ಇನ್‌ಫೆಂಟ್ರಿ ರಸ್ತೆ,
ಬೆಂಗಳೂರು.

ಮಾನ್ಯರೇ,

**ವಿಷಯ:** ಶ್ರೀಮತಿ ಹೆಚ್.ಸಿ ಕುಶಲ ಇವರ ಮನವಿ ಕುರಿತು.

**ಉಲ್ಲೇಖ:** ಅರ್ಜಿದಾರರ ಅರ್ಜಿಯು ಆಯೋಗದಲ್ಲಿ ಸ್ವೀಕೃತಗೊಂಡ ದಿನಾಂಕ:11.11.2025.

**********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶ್ರೀಮತಿ ಹೆಚ್.ಸಿ ಕುಶಲ, ಕುಶಲ ಕಲಾವೃಂದ (ರಿ), ನಂ.09, 33ನೇ ಮುಖ್ಯರಸ್ತೆ, ಬನಶಂಕರಿ ವಾರ್ತೆ, ಇಂಚರ ಹೋಟೆಲ್ ಹಿಂಭಾಗ, ಅಬ್ಬಯ್ಯರೆಡ್ಡಿ ಲೇಔಟ್, ಅಷ್ಟಲಕ್ಷ್ಮೀ ಲೇಔಟ್, ಜೆ.ಪಿ ನಗರ, 6ನೇ ಹಂತ, ಬೆಂಗಳೂರು, ಇವರು ಆಯೋಗದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯಲ್ಲಿ ಕಲರ್ಸ್ ಚಾನಲ್‌ನಲ್ಲಿ ಪ್ರಸಾರವಾಗುತ್ತಿರುವ ಬಿಗ್ ಬಾಸ್ ರಿಯಾಲಿಟಿ ಶೋನಲ್ಲಿ ಗಿಲ್ಲಿ ಎಂಬ ಹಾಸ್ಯ ನಟನು ರಿಷ ಎಂಬ ಹೆಣ್ಣು ಮಗಳ ಉಡುಪನ್ನು ಬಾತ್‌ರೂಮಿನಿಂದ ತಂದು ಹೊರ ಹಾಕಿರುವುದಾಗಿ ತಿಳಿಸಿರುತ್ತಾರೆ. ಹೆಣ್ಣು ಮಕ್ಕಳ ಉಡುಪನ್ನು ಮುಟ್ಟುವ ಅಧಿಕಾರ ಅವರಿಗೆ ಯಾರು ಅಧಿಕಾರ ನೀಡಿರುವುದಾಗಿ ಇದರಿಂದ ಸಮಾಜಕ್ಕೆ ಯಾವ ರೀತಿ ಸಂದೇಶವನ್ನು ಪ್ರಸಾರ ಮಾಡಲು ಹೊರಟಿರುವುದಾಗಿ ತಿಳಿಸುತ್ತಾ, ಕಲರ್ಸ್ ಶೋವನ್ನು ನಿಲ್ಲಿಸಬೇಕೆಂದು ಆಯೋಗದಲ್ಲಿ ಸಲ್ಲಿಸಿರುವ ಅರ್ಜಿಯಲ್ಲಿ ಮನವಿ ಮಾಡಿರುತ್ತಾರೆ. (ಅರ್ಜಿದಾರರ ಅರ್ಜಿಯ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಿದೆ)

ಆದ್ದರಿಂದ ಅರ್ಜಿದಾರರ ಅರ್ಜಿಯಲ್ಲಿನ ವಿಷಯದ ಕುರಿತು ನಿಯಮಾನುಸಾರ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಯವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಹಾಗೂ ಕೈಗೊಂಡ ಕ್ರಮದ ವರದಿಯನ್ನು ಆಯೋಗಕ್ಕೆ **ಅತೀ ಜರೂರಾಗಿ** ಆಯೋಗಕ್ಕೆ ಕಳುಹಿಸಿ ಕೊಡುವಂತೆ ಕೋರಿದೆ.

ತಮ್ಮ ವಿಶ್ವಾಸಿ,

ಕಾರ್ಯದರ್ಶಿ,
ಕ.ರಾ.ಮ.ಆ. ಬೆಂಗಳೂರು

<u>ಪ್ರತಿಯನ್ನು:</u>

ಪೊಲೀಸ್ ಅಧೀಕ್ಷಕರು, ಪೊಲೀಸ್ ಅಧೀಕ್ಷಕರವರ ಕಛೇರಿ, ಬೆಂಗಳೂರು ದಕ್ಷಿಣ, ರಾಮನಗರ ಜಿಲ್ಲೆ, **ಇವರಿಗೆ ಸೂಕ್ತ ಕ್ರಮಕ್ಕಾಗಿ.**